RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| ಭಾಗ - IV-A | ಬೆಂಗಳೂರು, ಮಂಗಳವಾರ, ಮಾರ್ಚ್ ೪, ೨೦೧೪ (ಫಾಲ್ಗುಣ ೧೩, ಶಕ ವರ್ಷ ೧೯೩೫) | ನಂ. ೧೯೮ |
|---|---|---|
| Part - IV-A | Bangalore, Tuesday, March 4, 2014 (Phalguna 13, Shaka Varsha 1935) | No. 198 |


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 36 ಜಿಪಸ 2014, ಬೆಂಗಳೂರು, ದಿನಾಂಕ: 03-03-2014

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 296(ಎ) ಇದರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯವು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಸ್ವೀಕರಿಸಲಾಗುವ ದೂರುಗಳನ್ನು ಪರಿಹರಿಸಿ ಶೀಘ್ರವಾಗಿ ವಿಲೇಗೊಳಿಸಲು ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗೆ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಪಂಚಾಯತಿ ಓಂಬುಡ್ಸ್‌ಮನ್‌ಗಳಾಗಿ ಈ ಕೆಳಕಂಡಂತೆ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

| ಕ್ರ.ಸಂ | ಪಂಚಾಯತ್ ರಾಜ್ ಸಂಸ್ಥೆಗಳು | ಓಂಬುಡ್ಸ್‌ಮನ್‌ರಾಗಿ ಪ್ರಾಧೀಕೃತವಾಗಿರುವ ಅಧಿಕಾರಿಗಳು |
|---|---|---|
| 1. | ಜಿಲ್ಲಾ ಪಂಚಾಯತಿಗಳು | ಪ್ರಾದೇಶಿಕ ಆಯುಕ್ತರುಗಳು – ಕಂದಾಯ ಇಲಾಖೆ. |
| 2. | ತಾಲ್ಲೂಕು ಪಂಚಾಯತಿಗಳು | ಜಿಲ್ಲಾಧಿಕಾರಿಗಳು – ಕಂದಾಯ ಇಲಾಖೆ. |
| 3. | ಗ್ರಾಮ ಪಂಚಾಯತಿಗಳು | ಉಪ ವಿಭಾಗಾಧಿಕಾರಿಗಳು – ಕಂದಾಯ ಇಲಾಖೆ. |

ನೇಮಕಗೊಂಡ ಓಂಬುಡ್ಸ್‌ಮನ್, ಅವರು, ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗಿನ ಪಂಚಾಯತ್ ರಾಜ್ ಸಂಸ್ಥೆಗಳ ಯಾವೊಬ್ಬ ಚುನಾಯಿತ ಸದಸ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಸ್ವೀಕರಿಸಲಾದ ಕುಂದುಕೊರತೆಗಳನ್ನು ಮತ್ತು ದೂರುಗಳನ್ನು ಸುನಾವಣೆ ಮಾಡಿದ ತರುವಾಯ, ತೀರ್ಮಾನವನ್ನು ನೀಡುವ ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

ಪಂಚಾಯತ್ ಓಂಬುಡ್ಸ್‌ಮನ್‌ರ ಅಧಿಕಾರಿಗಳು ಮತ್ತು ಪ್ರಕಾರ್ಯಗಳನ್ನು ಈ ಕೆಳಗೆ ನೀಡಲಾಗಿದೆ.

**296(ಬಿ) ಪಂಚಾಯತಿ ಓಂಬುಡ್ಸ್‌ಮನ್‌ರ ಅಧಿಕಾರಗಳು ಮತ್ತು ಪ್ರಕಾರ್ಯಗಳು:**

1. ಪಂಚಾಯತಿ ಓಂಬುಡ್ಸ್‌ಮನ್‌ರು, ಪಂಚಾಯತಿಗಳು ಮತ್ತು ಪಂಚಾಯತಿಗಳಿಂದ ಮೂಲತಃ ನಿಯಂತ್ರಿಸಲ್ಪಡುವ ಅಥವಾ ನಿಧಿಯನ್ನು ಪಡೆದಿರುವ ಪಂಚಾಯತಿಗಳು, ಪಂಚಾಯತಿ ಸಂಸ್ಥೆಗಳು, ಚುನಾಯಿತ ಸದಸ್ಯರು,

ಅಧಿಕಾರಿಗಳು ಮತ್ತು ನೌಕರರಿಂದ ಯಾವುದೇ ಆಪಾದನೆ ಅಥವಾ ತೆಗೆದುಕೊಂಡ ಕ್ರಮದ ಬಗ್ಗೆ ತನಿಖೆ ಮಾಡುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

2. ಪಂಚಾಯತಿ ಓಂಬುಡ್ಸ್‌ಮನ್‌ರು, ಸರ್ಕಾರವು ಅವರಿಗೆ ಮಾಡಿದ ಉಲ್ಲೇಖದ ಮೇಲೆ ಅಥವಾ ತಾನಾಗಿಯೇ ಪ್ರಾರಂಭಿಸಿದ ಕ್ರಮದ ಬಗ್ಗೆ ಚುನಾಯಿತ ಸದಸ್ಯರು, ಅಂಥ ಪಂಚಾಯತಿಗಳ ಅಥವಾ ಸಂಸ್ಥೆಗಳ ಅಥವಾ ಕಾರ್ಯನಿರ್ವಹಣಾ ಸಂಸ್ಥೆಗಳ ಅಧಿಕಾರಿ ಅಥವಾ ನೌಕರರ ವಿರುದ್ಧ, ಆಪಾದನೆಗಳು ಒಳಗೊಂಡಂತೆ ಎಲ್ಲಾ ವಿಷಯಗಳ ಮೇಲೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.

**ವಿವರಣೆ–1:** ಈ ಪ್ರಕರಣದ ಉದ್ದೇಶಕ್ಕಾಗಿ, ಪಂಚಾಯತ್ ಸಂಸ್ಥೆಗಳು ಎಂಬುದರಲ್ಲಿ, ಅವುಗಳ ಕಾರ್ಯಾಚರಣೆಯಲ್ಲಿ ಬರುವ, ಕೆಲವು ಮಟ್ಟಿನ ಕಾರ್ಯ ನಿರ್ವಹಣಾ ಸ್ವಾಯತ್ತತೆಯನ್ನು ಅನುಭವಿಸುತ್ತಿರುವ ಪಂಚಾಯತಿ ಸಂಸ್ಥೆಗಳು, ಗ್ರಾಮೀಣ ನೀರು ಮತ್ತು ನೈರ್ಮಲ್ಯ ವ್ಯವಸ್ಥೆ ಸಮಿತಿಯಗಳು, ಜಲಾನಯನ ಸಮಿತಿಗಳು, ಕೆರೆ ಬಳಕೆದಾರರ ಸಮಿತಿಗಳಂಥ ಸ್ವಾಯತ್ತ ಸಹಕಾರಿಗಳು ಮತ್ತು ಸಂಘಗಳನ್ನು ಒಳಗೊಳ್ಳುತ್ತವೆ.

**ವಿವರಣೆ–2:** ಪಂಚಾಯತಿಯಿಂದ ನಿಧಿಗಳನ್ನು ಪಡೆಯುವ ಸಂಸ್ಥೆಗಳು ಎಂಬುದರಲ್ಲಿ, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು, ಸರ್ಕಾರೇತರ ಸಂಘಗಳು ಮತ್ತು ನಿರ್ದಿಷ್ಟ ಅಥವಾ ಸಾಮಾನ್ಯವಾದ ವರ್ಗದ ಜನರಿಗೆ ಕೆಲವು ಸೇವೆಗಳನ್ನು ಒದಗಿಸುವುದಕ್ಕಾಗಿ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯಿಂದ ಮುಂಗಡವಾಗಿ ನಿಧಿಗಳನ್ನು ಪಡೆದುಕೊಂಡು ಇತರ ಸಂಸ್ಥೆಗಳನ್ನು ಒಳಗೊಳ್ಳುತ್ತವೆ.

**296(ಸಿ) ದೂರುಗಳು ಮತ್ತು ತನಿಖೆಗಳಿಗೆ ಸಂಬಂಧಿಸಿದ ಉಪಬಂಧಗಳು:–**

1. ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವೊಬ್ಬ ವ್ಯಕ್ತಿಯು, ಪಂಚಾಯತಿ ಓಂಬುಡ್ಸ್‌ಮನ್‌ಗೆ, ಈ ಕೆಳಗಿನ ಯಾವುದೇ ವಿಷಯದ ಸಂಬಂಧದಲ್ಲಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯ ಚುನಾಯಿತ ಸದಸ್ಯರ, ಅಧಿಕಾರಿಯ ಅಥವಾ ನೌಕರರ ವಿರುದ್ಧ, ಕ್ರಮ ಅಥವಾ ಕುಂದು ಕೊರತೆ ಅಥವಾ ಆಪಾದನೆಗಳನ್ನು ಒಳಗೊಂಡ ದೂರುಗಳನ್ನು ನೀಡಬಹುದು, ಎಂದರೆ.–
   i. ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಡಿಯಲ್ಲಿ ಆತನಿಗೆ ವಹಿಸಿದ ಯಾವುದೇ ಕಾರ್ಯದ ಲೋಪವಾಗಿದ್ದಲ್ಲಿ;
   ii. ನಿರ್ಲಕ್ಷ್ಯ, ಅಸಮರ್ಪಕ ಕಾರ್ಯನಿರ್ವಹಣೆ, ಕ್ರಮಬದ್ಧವಲ್ಲದ ಕ್ರಮಗಳು, ಸ್ವಜನಪಕ್ಷಪಾತ, ಪಕ್ಷಪಾತ ಮತ್ತು ಅಂಥಹುದೇ ಕ್ರಮಗಳನ್ನು ಒಳಗೊಂಡಂತೆ, ಆತನ ಸೇವಾ ವಿಫಲತೆಗಾಗಿ;
   iii. ದೂರುಗಳು, ಈ ಮುಂದಿನ ಯಾವುದೇ ಅಥವಾ ಎಲ್ಲಾ ವಿಷಯಗಳ ಸಂಬಂಧದಲ್ಲಿ ವಿಳಂಬಗಳು ಅಥವಾ ವಿಫಲತೆಯನ್ನು ಒಳಗೊಳ್ಳಬಹುದು, ಎಂದರೆ.–

      (ಎ) ಅರ್ಜಿಗಳು/ಮನವಿ ಪತ್ರಗಳು/ ಅಪೀಲುಗಳ ವಿಲೆ;

      (ಬಿ) ಪಂಚಾಯತಿಗಳಿಂದ/ ಪಂಚಾಯತಿ ಸಂಸ್ಥೆಗಳಿಂದ ಬಾಕಿಯಿಂದ ಸಂದಾಯಗಳು;

      (ಸಿ) ಪಂಚಾಯತಿಗಳ ಮಾಸಿಕ ಸಭೆಗಳನ್ನು ಕರೆಯುವುದು;

      (ಡಿ) ಪಂಚಾಯತಿ/ಪಂಚಾಯತಿ ಸಂಸ್ಥೆಗಳಲ್ಲಿ ಫಲಾನುಭವಿಗಳ ಆಯ್ಕೆ;

      (ಇ) ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಡಿಯಲ್ಲಿ ಪಂಚಾಯತಿ ನಿಕಾಯಗಳಿಗೆ ಪ್ರದತ್ತವಾದ ಶಾಸನಾತ್ಮಕ ಪ್ರಕಾರ್ಯಗಳ ನೆರವೇರಿಕೆ;

      (ಎಫ್) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು.

2. (1)ನೇ ಉಪ– ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ದೂರು ಅಥವಾ ಆಪಾದನೆಯು ಅಫಿಡವಿಟ್ಟಿನ ಸಮರ್ಥನೆಯೊಡನೆ ವಿವರಪಟ್ಟಿಕೆಯ ನಮೂನೆಯಲ್ಲಿ ಇರತಕ್ಕದ್ದು ಮತ್ತು ಆರು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಇರತಕ್ಕದ್ದು.
3. ಪಂಚಾಯತಿ ಓಂಬುಡ್ಸ್‌ಮನ್‌ರು, ಅಂಥ ಚುನಾಯಿತ ಸದಸ್ಯ, ಅಧಿಕಾರಿಗಳು ಅಥವಾ ನೌಕರರಿಗೆ, ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ನಿಯಮಿಸಬಹುದಾದಂಥ ರೀತಿಯಲ್ಲಿ ತನಿಖೆಯನ್ನು

ನಡೆಸಬಹುದು ಮತ್ತು ಪ್ರಕರಣದ ಪರಿಸ್ಥಿತಿಗಳಲ್ಲಿ ತಾನು ಯುಕ್ತವೆಂದು ಭಾವಿಸಬಹುದಾದಂತೆ ಸಂದರ್ಭಾನುಸಾರವಾಗಿ ವರದಿಯನ್ನು ಸರ್ಕಾರಕ್ಕೆ ಕಳುಹಿಸಬಹುದು.

**296(ಡಿ) ತನಿಖೆ ನಡೆಸಲು ಮತ್ತು ಸಾಕ್ಷ್ಯವನ್ನು ತೆಗೆದುಕೊಳ್ಳಲು ಪಂಚಾಯತಿ ಓಂಬುಡ್ಸ್‌ಮನ್‌ರ ಅಧಿಕಾರಗಳು:–**

1. ಈ ಅಧಿನಿಯಮದ ಅಡಿಯಲ್ಲಿ, ಪ್ರಾಥಮಿಕ ವಿಚಾರಣೆಯು ಒಳಗೊಂಡಂತೆ, ಯಾವುದೇ ತನಿಖೆಯ ಉದ್ದೇಶಕ್ಕಾಗಿ, ಪಂಚಾಯತಿ ಓಂಬುಡ್ಸ್‌ಮನ್‌ರು, ತನಿಖೆಗೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಲು ದಸ್ತಾವೇಜನ್ನು ಹಾಜರುಪಡಿಸಲು ಸಾಧ್ಯವಿದೆಯೆಂದು ತಾನು ಅಭಿಪ್ರಾಯ ಪಡುವ ಯಾವೊಬ್ಬ ವ್ಯಕ್ತಿಯನ್ನು ಯಾವುದೇ ಅಂಥ ಮಾಹಿತಿಯನ್ನು ಒದಗಿಸುವುದಕ್ಕೆ ಅಥವಾ ಅಂಥ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಅಗತ್ಯಪಡಿಸಬಹುದು.
2. ಯಾವುದೇ ಅಂಥ ತನಿಖೆಯ ಉದ್ದೇಶಕ್ಕಾಗಿ (ಪ್ರಾಥಮಿಕ ವಿಚಾರಣೆಯು ಒಳಗೊಂಡಂತೆ), ಪಂಚಾಯತಿ ಓಂಬುಡ್ಸ್‌ಮನ್‌ರು, ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ದಾವೆಯ ಅಧಿವಿಚಾರಣೆ ನಡೆಸುವಾಗ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿರತಕ್ಕದ್ದು, ಎಂದರೆ.–
   (ಎ) ಯಾವೊಬ್ಬ ವ್ಯಕ್ತಿಯನ್ನು ಸಮನ್ ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣದ ಮೇಲೆ ಪರೀಕ್ಷಿಸುವುದು.
   (ಬಿ) ಯಾವುದೇ ದಸ್ತಾವೇಜಿನ ಶೋಧನೆ ಮತ್ತು ಹಾಜರು ಪಡಿಸುವುದನ್ನು ಒತ್ತಾಯಪಡಿಸುವುದು;
   (ಸಿ) ಅಫಿಡವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;
   (ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಅಧಿಕಾರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕೋರುವುದು;
   (ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನ್‌ಗಳನ್ನು ಹೊರಡಿಸುವುದು;
   (ಎಫ್) ನಿಯಮಿಸಬಹುದಾದಂಥ ಇತರ ವಿಷಯಗಳು.
3. ಪಂಚಾಯತಿ ಓಂಬುಡ್ಸ್‌ಮನ್‌ರ ಮುಂದಿರುವ ಯಾವುದೇ ವ್ಯವಹರಣೆಯನ್ನು ಭಾರತ ದಂಡ ಸಂಹಿತೆಯ 193ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು.
4. ಯಾವೊಬ್ಬ ವ್ಯಕ್ತಿಯನ್ನು.–
   (ಎ) ಕರ್ನಾಟಕ ರಾಜ್ಯದ ವ್ಯವಹಾರಗಳು ಅಥವಾ ಭಾರತದ ಭದ್ರತೆ ಅಥವಾ ರಕ್ಷಣೆ ಅಥವಾ ಅಂತರಾಷ್ಟ್ರೀಯ ಸಂಬಂಧಗಳಿಗೆ ಬಾಧಕವಾಗುವಂಥ (ಯಾವುದೇ ದೇಶದ ಸರ್ಕಾರದೊಂದಿಗಿನ ಅಥವಾ ಯಾವುದೇ ಅಂತರಾಷ್ಟ್ರೀಯ ಸಂಸ್ಥೆಯೊಂದಿಗಿನ ಭಾರತದ ಸಂಬಂಧಗಳು ಒಳಗೊಂಡಂತೆ);
   (ಬಿ) ರಾಜ್ಯ ಸರ್ಕಾರದ ಸಚಿವ ಸಂಪುಟದ ಅಥವಾ ಆ ಸಚಿವ ಸಂಪುಟದ ಯಾವುದೇ ಸಮಿತಿಯ ವ್ಯವಹರಣೆಗಳನ್ನು ಬಹಿರಂಗಪಡಿಸುವುದನ್ನು ಒಳಗೊಳ್ಳಬಹುದಾದಂಥ,
   – ಮಾಹಿತಿಯನ್ನು ಒದಗಿಸುವುದಕ್ಕೆ ಅಥವಾ ಅಂಥ ಪ್ರಶ್ನೆಗೆ ಉತ್ತರಿಸುವುದಕ್ಕೆ ಅಥವಾ ಯಾವುದೇ ದಸ್ತಾವೇಜನ್ನು ಅಷ್ಟರಮಟ್ಟಿಗೆ ಹಾಜರುಪಡಿಸುವುದಕ್ಕೆ ಈ ಅಧಿನಿಯಮದ ಬಲದಿಂದಾಗಿ ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅಧಿಕೃತಗೊಳಿಸತಕ್ಕದ್ದಲ್ಲ.

**ವಿವರಣೆ:–** ಈ ಉಪ– ಪ್ರಕರಣದ ಉದ್ದೇಶಕ್ಕಾಗಿ, ಯಾವುದೇ ಮಾಹಿತಿ, ಉತ್ತರ ಅಥವಾ ದಸ್ತಾವೇಜಿನ ಒಂದು ಭಾಗವು (ಎ) ಖಂಡ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದಲ್ಲಿದೆಯೆಂದು ಮುಖ್ಯ ಕಾರ್ಯದರ್ಶಿಯವರು ಪ್ರಮಾಣೀಕರಿಸಿರುವ ಪ್ರಮಾಣ ಪತ್ರಕ್ಕೆ ಬದ್ಧವಾಗಿರತಕ್ಕದ್ದು ಮತ್ತು ನಿರ್ಣಾಯಕವಾಗಿರತಕ್ಕದ್ದು.

5. ಈ ಅಧಿನಿಯಮದ ಅಡಿಯಲ್ಲಿನ ತನಿಖೆಯ ಉದ್ದೇಶಕ್ಕಾಗಿ, ಯಾವೊಬ್ಬ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ವ್ಯವಹರಣೆಗಳಲ್ಲಿ ಮಾಹಿತಿ ನೀಡಲು ಅಥವಾ ದಸ್ತಾವೇಜನ್ನು ಹಾಜರುಪಡಿಸಲು ಆತನನ್ನು ಒತ್ತಾಯಪಡಿಸದಿರಬಹುದಾದಂಥ ಯಾವುದೇ ಸಾಕ್ಷ್ಯವನ್ನು ನೀಡಲು ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಒತ್ತಾಯಪಡಿಸತಕ್ಕದ್ದಲ್ಲ.

**296 (ಇ) ಪರಿಶೀಲನೆಗೆ ಒಳಪಡದ ವಿಷಯಗಳು:– (1) ಪಂಚಾಯತ್ ಓಂಬುಡ್ಸ್‌ಮನ್‌ರು.–**

i. ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (ಕರ್ನಾಟಕ ಅಧಿನಿಯಮ 1985ರ 4), ಉಪಬಂಧಗಳ ಅಡಿಯಲ್ಲಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ತನಿಖೆ ಮಾಡುವಂಥ ಯಾವುದೇ ವಿಷಯದ, ಅಥವಾ

ii. ಕೇಂದ್ರ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮಿತಿಗಳ ಯಾವುದೇ ಉಪಬಂಧಗಳ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ತನಿಖೆ ನಡೆಸುತ್ತಿರುವ ಯಾವುದೇ ವಿಷಯದ,

–ತನಿಖೆ ನಡೆಸತಕ್ಕದ್ದಲ್ಲ.

**296(ಎಫ್) ಪಂಚಾಯತ್ ಓಂಬುಡ್ಸ್‌ಮನ್‌ರ ವರದಿಗಳು:–**

1. ಕುಂದುಕೊರತೆಗಳನ್ನು ಒಳಗೊಂಡಿರುವ ಯವುದೇ ಕ್ರಮ ಅಥವಾ ಆಪಾದನೆಯ ತನಿಖೆ ನಡೆಸಿದ ತರುವಾಯ ಪಂಚಾಯತ್ ಓಂಬುಡ್ಸ್‌ಮನ್‌ರು, ಅಂಥ ಕ್ರಮವು ಫಿರ್ಯಾದಿದಾರನ ಅಥವಾ ಯಾವೊಬ್ಬ ಇತರ ವ್ಯಕ್ತಿಗೆ ಅನ್ಯಾಯವಾಗುತ್ತಿದ್ದಲ್ಲಿ, ಅಥವಾ ಅನುಚಿತ ತೊಂದರೆಯನ್ನುಂಟು ಮಾಡಿದೆ ಎಂದು ಮನವರಿಕೆಯಾದರೆ ಅವರು ಲಿಖಿತ ವರದಿಯ ಮೂಲಕ ಅಂತ ಅನ್ಯಾಯ ಅಥವಾ ತೊಂದರೆಯನ್ನು ಅಂಥ ರೀತಿಯಲ್ಲಿ ಮತ್ತು ವರದಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಪರಿಹರಿಸಬೇಕೆಂದು ಅಥವಾ ನಿವಾರಿಸಬೇಕೆಂದು ಶಿಫಾರಸ್ಸು ಮಾಡಬಹುದು.
2. ಆಪಾದನೆಯ ಬಗ್ಗೆ ತನಿಖೆ ನಡೆಸಿದ ತರುವಾಯ ಪಂಚಾಯತ್ ಓಂಬುಡ್ಸ್‌ಮನ್‌ರು, ಅಂಥ ಕ್ರಮ ಅಥವಾ ಆಪಾದನೆಯ ಪೂರ್ಣವಾಗಿ ಅಥವಾ ಭಾಗಶಃ ರುಜುವಾತು ಆಗಿದೆಯೆಂದು ಮನವರಿಕೆಯಾದರೆ, ಅವರು ತಮ್ಮ ತೀರ್ಮಾನ ಮತ್ತು ಶಿಫಾರಸ್ಸುಗಳಿಗೆ ಪೂರಕವಾಗಿ ಸಂಬಂಧಪಟ್ಟ ದಸ್ತಾವೇಜುಗಳು, ವಾಸ್ತವಾಂಶಗಳು ಮತ್ತು ಇತರ ಸಾಕ್ಷ್ಯದೊಡಣೆ ತಮ್ಮ ತೀರ್ಮಾನ ಮತ್ತು ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಲಿಖಿತವಾಗಿ ತಿಳಿಸುವುದಕ್ಕಾಗಿ ನಿರ್ದಿಷ್ಟ ವರದಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಸಿ. ಬಸವರಾಜು
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) (100 ಪ್ರತಿಗಳು)